1635 (2030) ಶ್ರೀ ರಾಜೇಂದ್ರನ್.ಎಸ್. (ಕೆ.ಜಿ.ಎಫ್) ಮಾನ್ಯ ಮುಖ್ಯ ಮಂತ್ರಿಗಳು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ. ಸಚಿವಾಲಯದ ಮಟ್ಟದಿಂದ ತಾಲ್ಲೂಕು ಮಟ್ಟದವರೆಗಿನ ಕಛೇರಿಗಳಲ್ಲಿ ಅಧಿಕಾರಿ : ನೌಕರರುಗಳು ತಮ್ಮ ತಮ್ಮ ಕಡತಗಳನ್ನು ನಿಯಮಗಳ ಪ್ರಕಾರ ತತಕ್ಷಣ ಇತ್ಯರ್ಥಗೊಳಿಸದೆ ವಿಳಂಬ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ. ಆ ನೀತಿಯನ್ನು ಅನುಸರಿಸುವುದರ ಮೂಲಕ ಸಾರ್ವಜನಿಕರಿಗೆ ನ್ಯಾಯ ದೊರಕಿಸಿಕೊಡದೆ ಕಿರುಕುಳ ಕೊಡುತ್ತಿರುವುದನ್ನು ತಪ್ಪಿಸಲು ಸರ್ಕಾರ ಕೈಗೊಂಡಿರುವ ಮತ್ತು ಕೈಗೊಳ್ಳಲಿರುವ ಕ್ರಮಗಳೇನು?

ಇ. ಇಲಾಖೆಗಳಲ್ಲಿನ ಕಡತಗಳ ಸ್ಥಿತಿಗತಿಗಳನ್ನು ಅರಿಯಲು ಮತ್ತು ತ್ವರಿತವಾಗಿ ವಿಲೇವಾರಿ ಮಾಡುವ ದೃಷ್ಟಿಯಿಂದ ವೆಬ್‌ಸೈಟ್‌ನ್ನು ತೆರೆಯಲಾಗುವುದೇ?

ಈ. ಕಾನೂನು ಸಚಿವರು ಈ ದಿಸೆಯಲ್ಲಿ ಈಗಾಗಲೇ ಕೈಗೊಂಡಿರುವ ಕ್ರಮದಂತೆ ಇತರೆ ಎಲ್ಲಾ ಸಚಿವರುಗಳೂ ಕೂಡ ಕ್ರಮ ಕೈಗೊಳ್ಳಲು ಮಾನ್ಯ ಮುಖ್ಯಮಂತ್ರಿಗಳು ಕಟ್ಟುನಿಟ್ಟಿನ ಆದೇಶ ನೀಡುವರೆ?

ಉ. ಎಷ್ಟು ಸಮಯದೊಳಗಾಗಿ ರಾಜ್ಯ ಸರ್ಕಾರಿ ಇಲಾಖೆಗಳಲ್ಲಿರುವ ಎಲ್ಲಾ ಕಡತಗಳನ್ನು ವಲೇವಾರಿ ಮಾಡಲಾಗುವುದು?

ಶ್ರೀ ಧರಂಸಿಂಗ್ (ಮುಖ್ಯ ಮಂತ್ರಿಗಳು) :

ಅ. ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಲ್ಲಿ ವಲೇವಾರಿ ಆಗದೇ ಇರುವ ಕಡತಗಳ ವಲೇವಾರಿ ಬಗ್ಗೆ ಕಾಲಕಾಲಕ್ಕೆ ಸೂಚನೆಗಳನ್ನು : ಮಾರ್ಗದರ್ಶನಗಳನ್ನು ನೀಡಲಾಗುತ್ತಿದೆ.

ಆ. ಕಡತಗಳ ವಿಲೇವಾರಿಯನ್ನು ತೀವ್ರಗೊಳಿಸುವ ದಿಸೆಯಲ್ಲಿ ಇಲಾಖಾ ಮುಖ್ಯಸ್ಥರು ತಮ್ಮ ಅಧೀನಕ್ಕೆ ಒಳಪಡುವ ಕಛೇರಿಗಳನ್ನು ತಪಾಸಣೆ ನಡೆಸುವಂತೆ ಮತ್ತು ಲೋಪದೋಷಗಳು ಕಂಡು ಬಂದಲ್ಲಿ, ಪ್ರಕರಣಗಳ ಶೀಘ್ರ ವಿಲೇವಾರಿಗೆ ಕ್ರಮವನ್ನು ತೆಗೆದುಕೊಳ್ಳುವಂತೆಯೂ ಮತ್ತು ತಪ್ಪಿತಸ್ಥ ಅಧಿಕಾರಿ : ನೌಕರರ ವಿರುದ್ಧ ಶಿಸ್ತು ಕ್ರಮಗಳನ್ನು ತೆಗೆದುಕೊಳ್ಳುವಂತೆಯೂ ಈಗಾಗಲೇ ಸೂಚನೆಗಳನ್ನು ನೀಡಲಾಗಿದೆ. ಸಚಿವಾಲಯದ ಇಲಾಖೆಗಳ ಪ್ರಧಾನ ಕಾರ್ಯದರ್ಶಿಗಳು : ಕಾರ್ಯದರ್ಶಿಗಳಿಗೆ ಮುಖ್ಯ ಕಾರ್ಯದರ್ಶಿಯವರು ಅವರ ಇಲಾಖೆಗಳಲ್ಲಿನ ಬಾಕಿ ಇರುವ ಕಡತಗಳ ವಿಲೇವಾರಿಯನ್ನು ವಿಮರ್ಶಿಸಲು ನಿರ್ದಿಷ್ಟ ದಿನಾಂಕಗಳನ್ನು ನಿಗಧಿಪಡಿಸಿರುತ್ತಾರೆ.

ಇ. ಕಾನೂನು ಇಲಾಖೆಯ ವೆಬ್‌ಸೈಟ್ ಮಾತ್ರ ಆನ್‌ಲೈನ್‌ನಲ್ಲಿದೆ.

ಈ. ಅಂತರ್ಜಾಲ ಆಧಾರಿತ (ವೆಬ್‌ಬೇಸ್ಡ್) ಮಾಹಿತಿ ಪದ್ಧತಿಗಳನ್ನು ಎಲ್ಲಾ ಇಲಾಖೆಗಳೂ ಅಳವಡಿಸಿಕೊಳ್ಳುವ ಕಾರ್ಯಹಂತದಲ್ಲಿದೆ.

ಉ. ಕಡತ ವಲೇವಾರಿ ಮುಂದುವರೆಯುವ ಪ್ರಕ್ರಿಯೆಯಾಗಿದೆ. ಎಲ್ಲಾ ಕಡತಗಳನ್ನು ವಿಳಂಬವಿಲ್ಲದೇ ನಿರ್ವಹಿಸಲಾಗುತ್ತಿದೆ. ಹಳೆಯ ಕಡತಗಳನ್ನು ಮುಕ್ತಾಯಗೊಳಿಸುವುದರೊಂದಿಗೆ ಹೊಸ ಕಡತಗಳನ್ನು ತೆರೆಯುವುದರಿಂದ, ಕೆಲವು ಕಡತಗಳು ಯಾವಾಗಲೂ ವ್ಯವಹರಿಸಲು ಬಾಕಿ ಉಳಿದೇ ಇರುತ್ತವೆ.

1636(2031) ಶ್ರೀ.ಎಸ್.ರಾಜೇಂದ್ರನ್ (ಕೆ.ಜಿ.ಎಫ್) ಮಾನ್ಯ ಮುಖ್ಯಮಂತ್ರಿಗಳು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ. ಜಲಸಂಪನ್ಮೂಲ ಇಲಾಖೆಯಲ್ಲಿ ಬಹಳ ಸಮಯದಿಂದ ಖಾಲಿಯಿರುವ ಮುಖ್ಯ ಅಭಿಯಂತರರ ಹುದ್ದೆಗಳಿಗೆ ಖಾಯಂ ಆಗಿ ಮುಂಬಡ್ತಿ ನೀಡದಿರಲು ಕಾರಣಗಳೇನು

ಆ. ಹಾಗಿದ್ದಲ್ಲಿ ಅಂತಹ ಸದರಿ ಹುದ್ದೆಗಳಿಗೆ ಮುಂಬಡ್ತಿ ನೀಡಲು ಸರ್ಕಾರ ಕ್ರಮ ಕೈಗೊಳ್ಳುವುದೇ: